ಆಧಾರದ ಮೇಲೆ ಲೆವೆಲ್ ಕ್ರಾಸಿಂಗ್ 62ರ ಬಳಿ ನಿರ್ಮಾಣ ಮಾಡಲು ರೈಲ್ವೆ ಆಯವ್ಯಯ 2009–10ರಲ್ಲಿ ಮಂಜೂರಾಗಿದೆ.

ಆ) ರಾಜ್ಯ ಹಾಗೂ ಕೇಂದ್ರ ಸರ್ಕಾರ ವೆಚ್ಚ ಹಂಚಿಕೆ ಅಧಾರದ ಮೇಲೆ ನಿರ್ಮಾಣ ಮಾಡಲು ಮಂಜೂರಾತಿಯನ್ನು ನೀಡಿರುವುದರಿಂದ ಕಾಮಗಾರಿಯ GAD ಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಒಟ್ಟು ಮೊತ್ತ ರೂ.4.30 ಕೋಟಿ (ಕೇಂದ್ರ ಹಾಗೂ ರಾಜ್ಯ ಸರ್ಕಾರದ ವೆಚ್ಚ ಪಾಲು ಆಧಾರದಲ್ಲಿ)

ಈ) ಸಾಮಾನ್ಯ ಒಪ್ಪಂದ ನಕ್ಷೆ (GAD) ಅನುಮೋದನೆಯಾದ ನಂತರ ರೈಲ್ವೆ, ಲೋಕೋಪಯೋಗಿ ಇಲಾಖೆ ಹಾಗೂ ಸ್ಥಳೀಯ ಪ್ರಾಧಿಕಾರಗಳು ಸೇತುವೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಉ) ಇದೆ.

ಊ) 2009–10ನೇ ಸಾಲಿನ ಆಯವ್ಯಯದಲ್ಲಿ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೊಪ್ಪಳ ನಗರಕ್ಕೆ ಮುಂದಿನ ಎರಡು ವರ್ಷಗಳಲ್ಲಿ ತಲಾ 15 ಕೋಟಿಯಂತೆ ಒಟ್ಟು ರೂ. 30 ಕೋಟಿಗಳನ್ನು ಅನುದಾನ ಪಡೆಯಬಹುದಾಗಿದೆ. ಈ ಯೋಜನೆ ಜಾರಿಗೆ ಸಂಬಂಧಿಸಿದಂತೆ ಅನುಮತಿಯನ್ನು ಸಹ ನೀಡಲಾಗಿದೆ. ಕೊಪ್ಪಳ ನಗರಕ್ಕೆ ಪ್ರಸಕ್ತ ವರ್ಷದಲ್ಲಿ ರೂ. 4.55 ಕೋಟಿಗಳ ಎಸ್.ಎಫ್.ಸಿ ಮುಕ್ತ ನಿಧಿ ಅನುದಾನವನ್ನು ಮೂಲಸೌಕರ್ಯಗಳಿಗಾಗಿ ಬಿಡುಗಡೆ ಮಾಡಲಾಗಿದೆ ಮತ್ತು ಉತ್ತರ ಕರ್ನಾಟಕ ನಗರ ವಲಯ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.22.48 ಕೋಟಿ ಯೋಜನಾ ವೆಚ್ಚಕ್ಕೆ ಅನುಮೋದನೆ ನೀಡಲಾಗಿದೆ.

776 ಶ್ರೀ ಬಂಡೆಪ್ಪ ಕಾಶ್ಯಂಪೂರ್ : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ವಿಮಾನ ನಿಲ್ದಾಣವನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿದೆಯೇ;

ಆ) ಹಾಗಿದ್ದಲ್ಲಿ, ಈವರೆವಿಗೂ ಕಾರ್ಯಾರಂಭ ಮಾಡದಿರಲು ಕಾರಣಗಳೇನು;

ಇ) ಈ ವಿಮಾನ ನಿಲ್ದಾಣವನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಈ) ಈ ನಿಲ್ದಾಣವನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು :

ಅ) ಆ) ಇ) ಮತ್ತು ಈ)

ಬೀದರ್‌ನಲ್ಲಿರುವ ರಕ್ಷಣಾ ಮಂತ್ರಾಲಯದ ವಿಮಾನ ನಿಲ್ದಾಣದಲ್ಲಿ ನಾಗಾರೀಕ ವಿಮಾನಯಾನ ಸೇವೆ ಪ್ರಾರಂಭಿಸಲು ರಕ್ಷಣಾ ಮಂತ್ರಾಲಯದಿಂದ ತಾತ್ಪೂರ್ತಿಕ ಅನುಮತಿ ನೀಡಲಾಗಿದ್ದು ಈ ಸೇವೆಗಾಗಿ ಒಂದು ಹೊಸ ತಾತ್ಕಾಲಿಕ ಟರ್ಮಿನಲ್ ಕಟ್ಟಡವನ್ನು ರಾಜ್ಯ ಸರ್ಕಾರದ ಅನುದಾನದ ಮುಖೇನ ಜಿಲ್ಲಾಧಿಕಾರಿಗಳು, ಬೀದರ್ ಇವರು ಈಗಾಗಲೇ ನಿರ್ಮಿಸಿರುತ್ತಾರೆ. ಆದರೆ ಇದರ ನಿರ್ವಹಣೆ ಹಾಗೂ ನಾಗಾರೀಕ ವಿಮಾನಯಾನ ಸೇವೆಯನ್ನು ಪ್ರಾರಂಭಿಸಲು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವನ್ನು ಕೋರಲಾಗಿದೆ. ಸಧ್ಯ ಆರ್ಥಿಕ ಹಿಂಜರಿತದ ಕಾರಣ ಸಾಧ್ಯವಿರುವುದಿಲ್ಲವೆಂದು ಅವರಿಂದ ಅಭಿಪ್ರಾಯ ವ್ಯಕ್ತಗೊಂಡಿದ್ದು, ಆದರೂ ಕೂಡ ನಾಗರೀಕ ವಿಮಾನಯಾನ ಮಂತ್ರಾಲಯ ಭಾರತ ಸರ್ಕಾರವನ್ನು ಒತ್ತಾಯಿಸಲಾಗಿದೆ ಹಾಗೂ ಉತ್ತರ ನಿರೀಕ್ಷಿಲಾಗುತ್ತಿದೆ.

748 ಶ್ರೀ ರಾಜಶೇಖರ ಬಸವರಾಜ ಪಾಟೀಲ್ (ಹುಮ್ನಾಬಾದ್) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಮ್ನಾಬಾದ್ ಮತ ಕ್ಷೇತ್ರದಲ್ಲಿ ಯಾವ ಯಾವ ಪಟ್ಟಣಗಳಿಗೆ ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯಿಂದ ಶಾಶ್ವತವಾಗಿ ಕಾರಂಜಾ ಜಲಾಶಯದಿಂದ ಸಮಗ್ರವಾದ ಕುಡಿಯುವ ನೀರಿನ ಸರಬರಾಜು ಯೋಜನೆಯನ್ನು ಜಾರಿಗೊಳಿಸಲಾಗಿದೆ;

ಆ) ಈ ಯೋಜನೆಗಳನ್ನು ಎಂದಿನಿಂದ ಜಾರಿಗೊಳಿಸಲಾಗಿದೆ; ಈ ಯೋಜನೆಗಳ ಅಂದಾಜುವೆಚ್ಚವೆಷ್ಟು; ಇಲ್ಲಿಯವರೆಗೆ ಈ ಯೋಜನೆಗಳ ಅನುಷ್ಠಾನಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ;

ಇ) ಈ ಯೋಜನೆಗಳು ಈಗ ಯಾವ ಹಂತದಲ್ಲಿದೆ (ಯೋಜನಾವಾರು ವಿವರಗಳನ್ನು ಒದಗಿಸುವುದು);

ಈ) ನಿಯಮಾನುಸಾರ ಈ ಯೋಜನೆಗಳು ಎಂದು ಪೂರ್ಣವಾಗ ಬೇಕಾಗಿತ್ತು;

ಉ) ಈ ಯೋಜನೆಗಳು ಮಂದಗತಿಯಲ್ಲಿ ಸಾಗುತ್ತಿರುವುದಕ್ಕೆ ಕಾರಣಗಳೇನು;